


ಗಿರಣಿ ನಡೆಸುವುದು ಭಾಗವತಿಕೆಯಷ್ಟೇ ಸಲೀಸು




ವೇಷಗಳ ತಯಾರಿಯಲ್ಲಿ ಕಲ್ಮನೆ ನಂಜಪ್ಪನವರು

ಮಾಡದವನಲ್ಲ ನಾನು. ಪ್ರಶಸ್ತಿಗಾಗಿ ಕಾಡೋದು, ಬೇಡೋದು ಇಲ್ಲವೇ ಇಲ್ಲ. ಕೆಲವರು ನನ್ನ ಕಲೆ ಗುರುತಿಸಿ ಪ್ರೋತ್ಸಾಹಿಸಿದ್ದಾರೆ. ಪ್ರಶಸ್ತಿಗಿಂತ ಮೊದಲು ಕಲೆ ಉಳಿಯಬೇಕು. ಕಲೆ ಉಳಿದರೆ ಪ್ರಶಸ್ತಿ ತನ್ನಷ್ಟಕ್ಕೆ ತಾನೇ ಬರುತ್ತದೆ' ಎಂದು ಮುಗುಳ್ನಗುವರು ನಂಜಪ್ಪ.

ನಂಜಪ್ಪ ಅವರು ಭಾಗವತಿಕೆಯ ಜೊತೆಗೆ 'ಆಟ'ಗಳಿಗೆ ಅಗತ್ಯವಿರುವ ವೇಷಭೂಷಣಗಳನ್ನು ಸಿದ್ಧಗೊಳಿಸುವುದರಲ್ಲಿ ಸಿದ್ಧಹಸ್ತರು. ಅರಳಗುಪ್ಪೆಯ ಅವರ ಮನೆಯ ಮೊದಲ ಮಹಡಿಯಲ್ಲಿ ₹ 6 ಲಕ್ಷ ವೆಚ್ಚದಲ್ಲಿ ವೇಷಭೂಷಣಗಳ ಸಂಗ್ರಹಕ್ಕೆ ಒಂದು ಕೋಣೆಯನ್ನೇ ಕಟ್ಟಿಸಿದ್ದಾರೆ.

ರಾಕ್ಷಸ, ರಾಜ, ಬಾಲಕ, ಸ್ತ್ರೀ ವೇಷಗಳ ವೇಷಭೂಷಣಗಳನ್ನು ಸಂಗ್ರಹಿಸಿದ್ದಾರೆ. ಈ ವೇಷಭೂಷಣಗಳು ಮಾರುಕಟ್ಟೆಯಲ್ಲಿ ಖರೀದಿಸಿದ್ದಲ್ಲ, ಸ್ವತಃ ನಂಜಪ್ಪ ಅವರೇ ತಮ್ಮ ಕೈಯಾರೆ ಸಿದ್ಧಗೊಳಿಸಿರುವುದು!

'ನಾನು ಮೂರು ವರ್ಷ ಪಟ್ಟಾಗಿ ಕುಳಿತು ವೇಷಭೂಷಣ ಸಿದ್ಧಗೊಳಿಸಿದ್ದೇನೆ. ನಮ್ಮ ತಂಡಕ್ಕೆ ಬೇರೆಯವರಿಂದ ವಸ್ತುಗಳನ್ನು ಪಡೆಯುವುದಿಲ್ಲ. ನಮ್ಮ ವಸ್ತುಗಳನ್ನು ಬೇರೆಯವರಿಗೆ ಕೊಡುವುದಿಲ್ಲ. ನಾನು ಸಿದ್ಧಗೊಳಿಸಿರುವ ವೇಷಭೂಷಣಗಳನ್ನು ಮಾತ್ರ ನಮ್ಮ ತಂಡದವರು ಉಪಯೋಗಿಸುವರು' ಎನ್ನುವ ಅವರ ಮಾತಿನಲ್ಲಿ ಆತ್ಮವಿಶ್ವಾಸ–ಹೆಮ್ಮೆ ಇಣುಕುತ್ತದೆ.

## ನೆಲದ ಸೊಗಡಿನ ಹಳ್ಳಿಹಕ್ಕಿ

'ನನ್ನೆಲ್ಲ ಸಾಧನೆಗೆ ನಮ್ಮ ಊರು ಕಾರಣ' ಎಂದು ನಂಜಪ್ಪ ಹಲವು ವೇದಿಕೆಗಳಲ್ಲಿ ಅಭಿಮಾನದಿಂದ ಹೇಳಿದ್ದಾರೆ. 'ನಿಮ್ಮ ಊರ ಬಗ್ಗೆ ಹೆಚ್ಚು ಅಭಿಮಾನ ಇದ್ದಂಗೆ ಇದೆ' ಎಂದರೆ, 'ಹೌದು ಹೌದು... ನನ್ನೆಲ್ಲಾ ಸಾಧನೆಗೆ ಕಾರಣವೇ ನನ್ನ ನೆಲ ಕಣಪ್ಪ' ಎಂದು ಮುಗ್ಧವಾಗಿ ಹೇಳುತ್ತಾರೆ.

'ನಮ್ಮೂರು ಹಿಂದಿನಿಂದಲೂ ಸಾಂಸ್ಕೃತಿಕವಾಗಿ ಶ್ರೀಮಂತವಾಗಿದೆ. ಪರಿಶಿಷ್ಟ ಸಮುದಾಯದ ಭಾಗವತರು ಇಲ್ಲಿದ್ದರು. ಕಲೆಗೆ ಜಾತಿಯ ತರತಮ ಇಲ್ಲ. ಸಹಜವಾಗಿ ಅವರವರಿಗೆ ಅವರವರ ಊರೇ ದೊಡ್ಡದು. ಆದರೆ ಅರಳಗುಪ್ಪೆಯ ಸಾಂಸ್ಕೃತಿಕ ವಿಷಯವನ್ನು ದಾಖಲಿಸಲು ಶಿವಮೊಗ್ಗ, ಬೆಂಗಳೂರು ಮತ್ತು ಮೈಸೂರಿನಿಂದಲೂ ಜನರು ಬಂದಿದ್ದಾರೆ' ಎನ್ನುವಾಗ ಮಾತಿನಲ್ಲಿ ಸ್ವಗ್ರಾಮದ ಬಗ್ಗೆ ಹೆಮ್ಮೆ ಇಣುಕುತ್ತದೆ.

'ನಮ್ಮ ತಂದೆ ಕೂಲಿಮಠದ ಮೇಷ್ಟ್ರು. ಬಡತನದ ಕುಟುಂಬ. ನಮ್ಮ ಅಪ್ಪ, ಚಿಕ್ಕಪ್ಪ ಎಲ್ಲ ಸೇರಿ 40 ಮಂದಿಯ ಅವಿಭಕ್ತ ಕುಟುಂಬ. ದಿನದಿಂದ ದಿನಕ್ಕೆ ಅನುಕೂಲಸ್ಥರಾದೆವು. 250 ಎತ್ತಿನಗಾಡಿಗಳನ್ನು ನಾನೇ ಮಾಡಿದ್ದೇನೆ. ಬಡಿಗ ಕೆಲಸದಲ್ಲಿ ನಾನು ಸುತ್ತಲೂ ಹೆಸರುವಾಸಿ. ಮರದ ನೇಗಿಲು ಕುಂಟೆ ಕೂರಿಗೆಯನ್ನೂ ಮಾಡುತ್ತಿದ್ದೆ' ಎಂದು ತಮ್ಮ ಬದುಕಿನ ಮತ್ತೊಂದು ಮಗ್ಗುಲು ವಿವರಿಸುವರು.

## ವಿನಯವಂತ ಕಲಾವಿದ

'ರಾತ್ರಿ 7 ಗಂಟೆಗೆ ಸ್ನೇಹಿತರು ಫೋನ್ ಮಾಡಿ ನಿಮಗೆ ಪ್ರಶಸ್ತಿ ಬಂದಿದೆ ಎಂದರು. ಆಗ ಟೀವಿಯಲ್ಲಿ ಹೆಸರು ನೋಡಿದೆ. ಮತ್ತೆ ರಾತ್ರಿ ಚಂದನ ಟೀವಿಯಲ್ಲಿ ಪ್ರಶಸ್ತಿ ಪಡೆದವರ ಹೆಸರು ಹೇಳುವಾಗ ನನ್ನ ಹೆಸರು ಬಂದಿತು' ಎನ್ನುವ ಕಲ್ಮನೆ ನಂಜಪ್ಪ ಸಾಧನೆಯ ಮೇರು ಮುಟ್ಟಿದಾಗಲೂ ವಿನಯ ಉಳಿಸಿಕೊಂಡಿರುವ ಕಲಾವಿದರು.

## ಮಣ್ಣಿನ ಮಗ

ಕೃಷಿ ನಂಜಪ್ಪ ಅವರ ಕುಟುಂಬದ ಪ್ರಧಾನ ಬದುಕು. 'ನನ್ನಂಗೆ ಯಾರಾದರೂ ಕೃಷಿ ಮಾಡಲಿ ನೋಡೋಣ. ಪಲ್ಲ ಪಲ್ಲಗಟ್ಟಲೇ ದವಸ ಧಾನ್ಯ ಬೆಳೆದಿದ್ದೇನೆ' ಎನ್ನುವ ಅವರ ಮಾತಿನಲ್ಲಿ ಉತ್ಸಾಹ, ಹುಮ್ಮಸ್ಸು ಮತ್ತು ಕೃಷಿ ಪ್ರೀತಿ ಅಪಾರವಾಗಿ ಇಣುಕುತ್ತದೆ. ಹಿಟ್ಟಿನ ಗಿರಣಿಯನ್ನು ಸಹ ಅವರು ನಡೆಸಿದ್ದಾರೆ.

ನಂಜಪ್ಪ ಅವರ ಬಳಿ ಈಗಾಗಲೇ ಐದಾರು ಮಂದಿ ಭಾಗವತಿಕೆ ಸಹ ಕಲಿತಿದ್ದಾರೆ. ಎಲೆಮರೆಯಲ್ಲಿದ್ದ ತಮ್ಮನ್ನು ಗುರುತಿಸಿದ್ದು ಮಲ್ಲಿಕಾರ್ಜುನ ಮಹಾಮನೆ, ಶ್ರೀನಿವಾಸ ಕಪ್ಪಣ್ಣ, ಚಿಕ್ಕಣ್ಣ ಎಣ್ಣೆಕಟ್ಟೆ, ಶಿವಾನಂದ ಹೆಗಡೆ, ಎಂ.ವಿ. ಹೆಗಡೆ ಎಂದು ಬೆನ್ನುತಟ್ಟಿದವರನ್ನು ನೆನಪಿಸಿಕೊಳ್ಳುತ್ತಾರೆ.

'ಹಲವರು ನನ್ನ ಬದುಕಿಗೆ ಅಕ್ಷತೆ ಕಾಳು ಹಾಕುತ್ತಲೇ ಬಂದಿದ್ದಾರೆ' ಎನ್ನುವಾಗ ನಂಜಪ್ಪ ಅವರ ಕಣ್ಣೆಗಳು ಅರಳುತ್ತವೆ. ರಾಜ್ಯೋತ್ಸವ ಪ್ರಶಸ್ತಿ, ಜಾನಪದ ಶ್ರೀ, ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಅವರ ಕಲಾ ಹಾದಿಗೆ ಒಲಿದಿವೆ.

'ಈಗ ಟೀವಿ ಮತ್ತು ಕುಣಿತದ ಪ್ರಭಾವ ಜಾಸ್ತಿ ಆಗಿದೆ. ಕಲೆಯ ಮೇಲೆ ನಿಗಾ ಕಡಿಮೆ. ಭಾಗವತಿಕೆ ಆಡಿಸುವವನು ಹೇಗೆ ಬೇಕೋ ಆ ರೀತಿ ಆಡಿಸುತ್ತಾನೆ. ಆ ಕಾರಣದಿಂದಲೂ ಆಟ ಕ್ಷೀಣಿಸುತ್ತಿದೆ. ಕಲಿಕೆಯ ಆಸಕ್ತಿ ಇದ್ದವರಿಗೆ ಈಗಲೂ ಕಲಿಸುವೆ' ಎನ್ನುವ ನಂಜಪ್ಪ ಕನ್ನಡನಾಡಿನ ಅಪೂರ್ವ ಸಾಧಕರಲ್ಲೊಬ್ಬರು.

## ಮನೆಕಟ್ಟಲು ಓದುಬಿಟ್ಟೆ

ಆ ಕಾಲಕ್ಕೇ ನಾನು ಲೋಯರ್ ಸೆಕೆಂಡ್ರಿ ಓದಿದ್ದೆ. ನಾನು ಒಳ್ಳೆಯ ಸ್ಟೂಡೆಂಟ್. ಚೆನ್ನಾಗಿ ಓದುತ್ತಿದ್ದೆ. ಆದರೆ ಸ್ವಂತ ಮನೆ ಕಟ್ಟುವುದಕ್ಕಾಗಿ ನನ್ನ ಶಾಲೆ ಬಿಡಿಸಿದರು. ಚಿಕ್ಕವನಿದ್ದಾಗ ಹಳ್ಳಿಗಳಲ್ಲಿ ಭಾಗವತರನ್ನು ದೇವರು ಕಂಡ ರೀತಿ ಕಾಣುತ್ತಿದ್ದರು. ನಮ್ಮ ಕುಟುಂಬದಲ್ಲಿಯೂ ಭಾಗವತರು ಇದ್ದರಲ್ಲವೇ? ಅವರಿಗೆ ಇದ್ದ ಕಿಮ್ಮತ್ತನ್ನು ನೋಡಿ ನಾನು ಆ ರೀತಿ ಗೌರವ ಪಡೆಯಬೇಕು ಎನ್ನುವ ಆಸೆಯಲ್ಲಿಯೂ ಭಾಗವತಿಕೆಗೆ ಬಂದೆ. ನಮ್ಮೂರ ಕಲ್ಲೇಶ್ವರ ಸ್ವಾಮಿ ನನಗೆ ಶಕ್ತಿ ಕೊಟ್ಟು ಈ ಮಟ್ಟಕ್ಕೆ ಬೆಳೆಸಿದ್ದಾನೆ.

ನಮ್ಮದು ಆ ಕಾಲದಲ್ಲಿ ಮಾಳಿಗೆ ಮನೆ. ತೊಲೆಬಾಗಿಲಿಗೆ ಕಲ್ಲು ಇಟ್ಟಿದ್ದರು. ಆದಕ್ಕೆ 'ಕಲ್ ಬಾಗಿಲು' ಮನೆಯವರು ಎಂದು ಜನ ಕರೆಯುತ್ತಿದ್ದರು. ನಮ್ಮದು ಅವಿಭಕ್ತ ಕುಟುಂಬ. ನಂತರ ಐದು ಕಲ್ಲಿನ ಮನೆಗಳನ್ನು ಕಟ್ಟಿದೆವು. ಅಂದಿನಿಂದ ಕಲ್ಮನೆಯವರು ಎಂದೇ ಜನರ ಬಾಯಲ್ಲಿ ಪ್ರಚಲಿತವಾದೆವು.